ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 18/2023

.................................................................

CW 02
PW 03

| | | |
|---|---|---|
| ಹೆಸರು | : | ಅಶೋಕ ಗುರವ |
| ತಂದೆಯ ಹೆಸರು | : | ಲಕ್ಷ್ಮಣ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಹಳಿಯಾಳ. |

ದಿನಾಂಕ 31-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1,3,4 ಪರಿಚಯ ಇದ್ದಾರೆ. ಚಾಸ 5 ರವರು ಮರಣ ಹೊಂದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಪಂಚನಾಮೆಯನ್ನು ಈಗಾಗಲೇ **ನಿಪಿ 2 ಎಂದು ಗುರುತಿಸಲಾಗಿದ್ದು** , ಸಾಕ್ಷಿಯ ಸಹಿಯನ್ನು **ನಿಪಿ 2 ಬಿ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು 1 ವರೆ ವರ್ಷದ ಹಿಂದೆ ದುರ್ಗಾನಗರ ಗಲ್ಲಿಯಲ್ಲಿ ಮಾಡಿರುತ್ತೇನೆ. ಚಾಸಾ 1, ಚಾಸಾ 4 ಮತ್ತು ಆರೋಪಿ ಗಲಾಟೆ ಮಾಡುತ್ತಿದ್ದರು. ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಚಾಸಾ 1 ಮತ್ತು ಪೋಲಿಸರು ಇರುತ್ತೇವೆ ಎನ್ನುತ್ತಾರೆ ಇನ್ನೊಬ್ಬ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಕಟ್ಟಿಗೆಯನ್ನು ಹಿಡಿದುಕೊಂಡಿರುತ್ತಾರೆ. ಚಾಸಾ 1 ರವರು ಕೈ ಮಾಡಿ ತೋರಿಸುತ್ತಿದ್ದಾರೆ ನಮ್ಮನ್ನು ನಿಲ್ಲಿಸಿ ಭಾವಚಿತ್ರವನ್ನು ತೆಗೆದಿರುತ್ತಾರೆ. ಅಲ್ಲಿ ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಪಂಚರಾಗುವಂತೆ ಕೋರಿದ ನೀಡಿದ ನೋಟಿಸ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನೋಟಿಸನ್ನು **ನಿಪಿ 4 ಎಂದು** , ಸಾಕ್ಷಿಯ ಸಹಿಯನ್ನು **ನಿಪಿ 4 ಎ ಎಂದು** ಗುರುತಿಸಲಾಯಿತು. ಸದರಿ ನೋಟಿಸನಲ್ಲಿನ ವಿಷಯಗಳನ್ನು ನಮಗೆ ಓದಿ ಹೇಳಿಲ್ಲ ಸಹಿ ಮಾತ್ರ ಪಡೆದಿರುತ್ತಾರೆ. ಸಾಕ್ಷಿಗೆ ಮು ಮಾಲ 1 ನ್ನು ತೋರಿಸಲಾಗಿ ಆದಿನ ಜಪ್ತಪಡಿಸಿಕೊಂಡ ಕಟ್ಟಿಗೆ ಅದೇ ಇರಬಹುದು ಎನ್ನುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿಃ 09-12-2022 ರಂದು ಪೋಲಿಸರನ್ನು ನಿಮ್ಮನ್ನು ಚಾಸಾ 3 ರವರನ್ನು ನೋಟಿಸ ಕೊಟ್ಟು ಪಂಚರಾಗುವಂತೆ ಕೋರಿದರು, ಆಗ ಚಾಸಾ 1 ರವರು ದಿಃ 09-12-2022 ರಂದು ಬೆಳಿಗ್ಗೆ 11-.00 ಗಂಟೆಗೆ ಆರೋಪಿ ಸಾರಾಯಿ ಕುಡಿಯಲು ಹಣ ಕೇಳಿದಾಗ ಆರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಚಾಸಾ 4 ರವರಿಗೆ ಬಡಿಗೆಯಿಂದ ಹೊಡೆದು ಬೆದರಿಕೆ ಹಾಕಿದ ಜಾಗ ಇದೆ ಎಂದು ತೋರಿಸಿದ ಜಾಗದಲ್ಲಿ ಪೋಲಿಸರು ನಿಮ್ಮ ಮತ್ತು ಚಾಸಾ 3 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 5.00 ರವರೆಗೆ ಪಂಚನಾಮೆ ಜರುಗಿಸಿ ಆರೋಪಿ ಚಾಸಾ 4 ರವರಿಗೆ ಹೊಡೆಯಲು ಉಪಯೋಗಿಸಿದ ಕಟ್ಟಿಗೆಯನ್ನು ಜಪ್ತುಪಡಿಸಿಕೊಂಡು ಎಂದರೆ ಸರಿ. ಪಂಚನಾಮೆಯನ್ನು ನಿಮಗೆ ಓದಿ ಹೇಳಿ ನಿಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಆ ದಿನ ಚಾಸಾ 3 ರವರು ಜಾಗದಲ್ಲಿ ಹಾಜರಿದ್ದರು ಎಂದರೆ ಸರಿ. ಪೋಲಿಸರು ನಿಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ನಿಮಗೆ ಓದಿ ಹೇಳಿದ್ದರೂ ಸಹ ಆರೋಪಿತನಿಗೆ ಸಹಾಯವಾಗಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತ್ರೀ ಎಂ ಎಚ್ ಎಮ್ ವಕೀಲರಿಂದ

ಆರೋಪಿ ಚಾಸಾ 1 ಮತ್ತು 4 ರವರು ಜಗಳ ಮಾಡಿಲ್ಲ ಜಗಳ ಮಾಡುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರು ಮೊದಲೇ ಕಟ್ಟೆಗೆಯನ್ನು ಹಿಡಿದು ನಿಂತಿದ್ದರು ನಂತರ ನಿಮ್ಮನ್ನು ಕರೆದು ಭಾವಚಿತ್ರ ತೆಗೆದರು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.